ಕೊಡಬೇಕು. ಆದರೆ ಈ ಸಂದರ್ಭದಲ್ಲಿ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ಒಂದು ಪತ್ರ ಬರೆದರು. ದಿನಾಂಕ10-4-97ರಂದು ಕಂದಾಯ ಪರಿವೀಕ್ಷಕರ ಕಛೇರಿ ಮೂಡಬಿದ್ರೆಯಿಂದ, ಏಂಜೆಲ್ ಹಾರ್ಡ್ ಸಂಸ್ಥೆಯವರು ಅನಧಿಕೃತ ಕಟ್ಟಡ ನಿರ್ಮಾಣ ಮಾಡುತ್ತಿರುವ ವಿಚಾರದಲ್ಲಿ ಶ್ರೀ ಮೊಯಿಲಿಯವರು ಬರೆದ ಪತ್ರದ ಮೇರೆಗೆ 15-4-97ರಂದು ವಿಚಾರಣೆಗೆ ಬರುವುದಾಗಿ ತಿಳಿಸಿದ್ದು ಆ ದಿನ ಊರಿನವರು ಸೇರಿ, ಈ ಕಾರ್ಖಾನೆ ನಿರ್ಮಾಣ ಮಾಡುವ ಕೆಲಸವನ್ನು ಕೂಡಲೇ ನಿಲ್ಲಿಸಬೇಕೆಂದೂ, ಸದರಿ ಕಾರ್ಖಾನೆಗೆ ಪಂಚಾಯಿತಿ ವತಿಯಿಂದ ಕಟ್ಟಡ ಕಟ್ಟಲು ಅನುಮತಿ ಇಲ್ಲದೆ ನಿರ್ಮಿಸುತ್ತಿದ್ದಾರೆಂದು ಲಿಖಿತ ಮೂಲಕ ಕೊಟ್ಟಿರುತ್ತಾರೆ. ಈ ವಿಚಾರಣಾ ಸಭೆಗೆ ಪಂಚಾಯಿತಿ ಕಾರ್ಯದರ್ಶಿಯವರು ಹಾಜರಿರಬೇಕೆಂದು ನೋಟೀಸ್ ಕಳುಹಿಸಿದ್ದರೂ ಕೂಡ ಆ ಕಾರ್ಯದರ್ಶಿಯವರು ಗೈರು ಹಾಜರಾಗಿದ್ದರು. ಬಲಾತ್ಕಾರ ಮಾಡಿ ಕಡಂದಲೆ ಗ್ರಾಮ ಪಂಚಾಯಿತಿ ಸೆಕ್ರೆಟರಿ ಮೂಲಕ ಹೊಸ ಮಾರ್ಗವನ್ನು ಮಾಡುತ್ತಿದ್ದಾರೆ. ಕೊನೆಯದಾಗಿ, ನಾನು ಹೇಳುವುದೇನೆಂದರೆ, ಸದರಿ ಕಂಪನಿಯವರು ಗ್ರಾಮಸ್ಥರಿಗೆ ಯಾವ ತರಹದ ಮಾಹಿತಿಯನ್ನೂ ನೀಡದೆ, ಹಗಲೂ-ರಾತ್ರಿ ಕೆಲಸ ಮಾಡುತ್ತಿದ್ದಾರೆ. They are really under oppression. ಏನಾಗುತ್ತದೆಯೋ ಎನ್ನುವ ಆತಂಕ. ನನಗೆ ಒಂದು ಸಂಶಯ ಇರುವುದೇನೆಂದರೆ, ಕರ್ನಾಟಕದಲ್ಲಿ ವಿವಿಧ ಇನ್‌ಸ್ಟಿಟ್ಯೂಷನ್‌ಗಳೀನಿವೆ, are they anti-people? ಇವತ್ತು ಪಲ್ಯೂಷನ್ ಕಂಟ್ರೋಲ್ ಬೋರ್ಡ್ ಇರುವುದು. it should control the pollution and it should not create pollution. It should not become a pollution Creating Board. ಇದನ್ನು ನಾನು ಮತ್ತೆ ಸರ್ಕಾರದ ಮೂಲಕ ಸ್ಥಳೀಯ ಜನರ ಹಿತಕ್ಕೋಸ್ಕರ ಕ್ರಮ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಸಭಾಧ್ಯಕ್ಷರೆ, ಗ್ರಾಮ ಪಂಚಾಯಿತಿ ಕಾನೂನಿನ ಪ್ರಕಾರ, ಕೂಡ ಕ್ರಮ ಕೈಗೊಳ್ಳುತ್ತೇನೆ. ಅದನ್ನು ಮಾಡಬಹುದು.

ಶಾಸನ ರಚನೆ ಕಾರ್ಯಕಲಾಪಗಳು

ಎ) ವಿಧೇಯಕಗಳ ಮಂಡನೆ

ಅ) ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ) ವಿಧೇಯಕ, 1997 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ,

"1997ರ ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ)ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. X

ಆ) ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕ 1997ರ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1997ರ ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕವನ್ನು ಮಂಡಿಸಲು ಅನುಮಿತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. XX

X ಅನುಬಂಧ -I, XX ಅನುಬಂಧ - II

ವಿತ್ತೀಯ ಕಾರ್ಯಕಲಾಪಗಳು

ಎ) 1997-98ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 205(1)ನೇ ಅನುಚ್ಛೇದದ ಮೇರೆಗೆ 1997-98ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೆಯ ಕಂತು) ನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,